ಮಕ್ಕಳು ಇಡೀ ದಿವಸ ೩-೪ ಗಂಟೆ ಬಸ್‌ಗಾಗಿ ಕಾಯ್ದು ಕೆಲವು ಸಾರಿ ವಾಪಸ್ ಕೂಡಾ ಹೋಗುತ್ತಿದ್ದಾರೆ. ಈ ಘಟಕದಲ್ಲಿನ ಅಧಿಕಾರಿ ಜೇಜವಾಬ್ದಾರಿಯಿಂದ ಇದ್ದು ಸರಿಯಾಗಿ ಕೆಲಸ ಮಾಡುತ್ತಿರುವುದಿಲ್ಲ. ಇದನ್ನು ತಾವು ಪರಿಶೀಲನೆ ಮಾಡಬೇಕು. ಬಸ್‌ಗಳು ವೇಳೆಗೆ ಸರಿಯಾಗಿ ಓಡುವಹಾಗೆ ಸರಿಮಾಡಬೇಕು. ಮೊದಲು ಇದ್ದಹಾಗೆ ಹೆಚ್ಚಿನ ಅನುಕೂಲವನ್ನು ಜನರಿಗೆ ಒದಗಿಸಬೇಕು. ಇವತ್ತು ಆಲ್ಲಿನ ಜನರಿಗೆ ಈ ಬಗ್ಗೆ ತಾಳ್ಮೆ ಮೀರಿದೆ. ಈ ಬಗ್ಗೆ ಆದಷ್ಟು ಜಾಗ್ರತೆ ಕ್ರಮ ತೆಗೆದು ಸರಿಪಡಿಸಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಅವರು ಹೇಳಿದ ರೀತಿಯಲ್ಲಿ ರೂಟ್ ಕ್ಯಾನ್ಸಲ್ ಆಗಿದ್ದರೆ ಆ ಬಗ್ಗೆ ವಿಚಾರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್.—ಗ್ರಾಮಾಂತರ ಪ್ರದೇಶದಲ್ಲಿ ಮೊಸ ಬಸ್‌ಗಳನ್ನು ಹಾಕುವುದು ಇರಲಿ, ರೆಗ್ಯುಲರ್ ಓಡಾಡುತ್ತಿರುವ ಬಸ್‌ಗಳನ್ನೇ ನಿಲ್ಲಿಸಿಬಿಡುತ್ತಾರೆ. ಇನ್ನು ಕಾಡು ಪ್ರದೇಶದಲ್ಲಿ ಅಂತೂ ಆನೆಗಳ ಕಾಟದ ಜೊತೆಗೆ ಈ ಬಸ್‌ಗಳೂ ನಿಲುಗಡೆಯಾದರೆ ಆ ಜನರ ಸ್ಥಿತಿ ಏನು ? ಒಂದು ಕಡೆ ಆನೆಗಳ ಭಯ ಇನ್ನೊಂದು ಕಡೆ ಬಸ್ ಬರುವುದಿಲ್ಲ. ಇಂತಹ ಭಾಗಗಳಲ್ಲಿ ಆದ್ಯತೆ ಕೊಟ್ಟು ಹೆಚ್ಚು ಬಸ್ ಓಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಅಧ್ಯಕ್ಷರು.—ಇದು ಹಿರೇಕೆರೂರಿಗೆ ಸಂಬಂಧಪಟ್ಟ ಪ್ರಶ್ನೆ. ಅಲ್ಲಿ ಆನೆಗಳು ಇಲ್ಲ.

ಶ್ರೀ ಎಂ. ಮಹದೇವ್.—ಆಲ್ಲೂ ಆನೆಗಳು ಇವೆ. ಆಲ್ಲಿ ಕಾಡೂ ಸಹಾ ಇದೆ.

ಶ್ರೀ ಬಿ. ಹೆಚ್. ಬನ್ನೀಕೋಡ್.—ಆಲ್ಲಿ ಡಿಪೋ ಮೇನೇಜರ್ ಸರಿಯಾಗಿ ಜವಾಬ್ದಾರಿಯಿಂದ ಕೆಲಸ ಮಾಡುತ್ತಿಲ್ಲ. ಈ ಬಗ್ಗೆ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತದೆ ?

ಅಧ್ಯಕ್ಷರು.—ನಿಮಗೆ ಎರಡು ಉಪಪ್ರಶ್ನೆಗೆ ಅವಕಾಶ ಕೊಟ್ಟಿದ್ದು ಅವಕ್ಕೆ ಸೂಕ್ತ ಉತ್ತರ ಪಡೆದುಕೊಂಡಿದ್ದೀರಿ. ಈಗ ಮುಂದಿನ ಪ್ರಶ್ನೆ.

ಅಧ್ಯಕ್ಷರು.—ಮಾನ್ಯ ಡಿಸೋಜ ಅವರೇ, ನಿಮ್ಮ ಚುಕ್ಕೆ ಪ್ರಶ್ನೆ ೩೭೪ನ್ನು ಇಂಧನ ಮಂತ್ರಿಗಳಿಗೆ ವರ್ಗಾವಣೆ ಆಗಿದೆ. ಅವರ ಖಾತೆಗೆ ಸಂಬಂಧಪಟ್ಟ ಪ್ರಶ್ನೋತ್ತರ ವೇಳೆಯಲ್ಲಿ ತಮ್ಮ ಪ್ರಶ್ನೆಗೆ ಉತ್ತರ ಬರುತ್ತದೆ.

ಏತ ನೀರಾವರಿ ಮೂಲಕ ನೀರಾವರಿಗೊಳಪಟ್ಟ ಪ್ರದೇಶದ ಬಗ್ಗೆ

೬೧೮. ಶ್ರೀ ಆರ್. ಎನ್. ನಾಯ್ಕ (ಭಟ್ಕಳ).— ಮಾನ್ಯ ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ರಾಜ್ಯದಲ್ಲಿ (ಲಿಫ್ಟ್ ಇರಿಗೇಷನ್) ಏತ ನೀರಾವರಿ ಮೂಲಕ ಎಷ್ಟು ಎಕರೆಗೆ ನೀರಾವರಿಯಾಗಬಹುದು ಎಂದು ಅಂದಾಜಿಸಲಾಗಿದೆ;

ಆ) ಈಗ ರಾಜ್ಯದಲ್ಲಿ ಎಷ್ಟು ಎಕರೆ ಪ್ರದೇಶ ಏತ ನೀರಾವರಿಗೆ ಒಳಪಟ್ಟಿದೆ;

ಇ) ಹೊನ್ನಾವರ ತಾಲ್ಲೂಕು ಶರಾವತಿ ನದಿಯ ದಂಡೆ ಪ್ರದೇಶದಲ್ಲಿ ಎಷ್ಟು ಎಕರೆ ಪ್ರದೇಶ ಯಾತ ನೀರಾವರಿಗೆ ಒಳಪಡಿಸಲಾಗಿದೆ? ಇನ್ನೆಷ್ಟು ಪ್ರದೇಶ ನೀರಾವರಿಗೆ ಒಳಪಡಿಸಲಾಗುವುದು;

ಈ) ಹೊನ್ನಾವರ ತಾಲ್ಲೂಕು ಮುಂಕಿ ಗ್ರಾಮವನ್ನು ನೀರಾವರಿ ಕ್ಷೇತ್ರವಾಗಿ ಮಾರ್ಪಡಿಸಲು ಬಜೆಟ್ ಮಂಜೂರು ಮಾಡಲಾಗಿದೆಯೇ?

ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಯವರು).—

ಅ) ೯,೮೦,೦೦೦ ಎಕರೆಗಳು (ಉದ್ದೇಶಿತ ಏತ ನೀರಾವರಿ ಯೋಜನೆಗಳಿಂದ)

ಆ) ೩,೧೩,೯೦೭ ಎಕರೆಗಳು.

ಇ) ಹೊನ್ನಾವರ ತಾಲ್ಲೂಕಿನ ಶರಾವತಿ ನದಿಯ ದಂಡೆಯಲ್ಲಿ ೯ ಏತ ನೀರಾವರಿ ಯೋಜನೆಗಳ ಮೂಲಕ ಈಗಾಗಲೇ ೧೭೬೯ ಎಕರೆ ಪ್ರದೇಶವನ್ನು ನೀರಾವರಿಗೆ ಒಳಪಡಿಸಲಾಗಿದೆ. ಇನ್ನೂ ೧೪,೫೨೮ ಎಕರೆ ಪ್ರದೇಶಕ್ಕೆ ಏತ ನೀರಾವರಿ ಸೌಲಭ್ಯ ಕಲ್ಪಿಸುವ ಪ್ರಸ್ತಾವನೆ ಇದೆ.

ಈ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮವು ಕೈಗೊಳ್ಳಲು ಉದ್ದೇಶಿಸಿರುವ ಯೋಜನೆಗಳಲ್ಲಿ ಹೊನ್ನಾವರ ತಾಲ್ಲೂಕಿನ ಮಂಕಿ ಗ್ರಾಮದ ಏತ ನೀರಾವರಿ ಯೋಜನೆ ಸೇರಿದ್ದು, ಇನ್ನೂ ಅನ್ವೇಷಣಾ ಹಂತದಲ್ಲಿದೆ.

ಶ್ರೀ ಆರ್.ಎನ್. ನಾಯ್ಕ.—ಅಧ್ಯಕ್ಷರೇ, ೯ ಲಕ್ಷ ಎಕರೆಗಳಿಗೆ ಏತ ನೀರಾವರಿ ಮೂಲಕ ನೀರಾವರಿ ಮಾಡುವುದಕ್ಕೆ ಸಾಧ್ಯವಿದೆ ಎಂದು ಹೇಳಿದ್ದಾರೆ. ಈಗಾಗಲೇ ಕೇವಲ ೩,೧೩,೯೦೭ ಎಕರೆಗೆ ಏತ ನೀರಾವರಿಯಿಂದ ನೀರು ಕೊಡುತ್ತಿದ್ದೇವೆಂದು ಹೇಳಿದ್ದಾರೆ. ವಿಷಯ ಹೀಗಾದರೆ, ಸಾಧನೆ ಮಾಡಬೇಕಾದದ್ದು ಇನ್ನೂ ಬಹಳ ಇರುವಾಗ ಈ ಏತ ನೀರಾವರಿ ಕಾರ್ಪೊರೇಷನ್ ಯಾವ ಮಟ್ಟದಲ್ಲಿ ತನ್ನ ಕಾರ್ಯ ನಿರ್ವಹಿಸುತ್ತಿದೆ ಎಂಬುದನ್ನು ಹೇಳಬೇಕು. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಆಣೆಕಟ್ಟುಗಳನ್ನು ಕಟ್ಟಿ ನೀರನ್ನು ಭೂಮಿಗೆ ಉಣಿಸುವುದಕ್ಕೆ ಸಾಧ್ಯವಿಲ್ಲ. ನಾವು ಸಿಹಿ ನೀರು ಸಿಗುವ ಕಡೆಗಳಲ್ಲಿ ಲಿಫ್ಟ್ ಇರಿಗೇಷನ್ ಮೂಲಕ ನೀರನ್ನು ಪಡೆದು ನೀರಾವರಿ ಮಾಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ನಮ್ಮ ಉತ್ತರ ಕನ್ನಡ ಜಿಲ್ಲೆಗೆ ಲಿಫ್ಟ್ ಇರಿಗೇಷನ್ ಮೂಲಕ ವಿಶೇಷ ಆದ್ಯತೆ ಕೊಟ್ಟು ನೀರನ್ನು ಒದಗಿಸುವುದಕ್ಕೆ ಸರ್ಕಾರ ಮನಸ್ಸು ಮಾಡಿದೆಯೇ? ಅದರಲ್ಲೂ ಶರಾವತಿ ನದಿ ಎಡ ಮತ್ತು ಬಲ ದಂಡೆಯಲ್ಲಿ ಈ ರೀತಿಯ ಕಾರ್ಯಕ್ರಮಗಳನ್ನೇನಾದರೂ ಸರ್ಕಾರ ಇಟ್ಟುಕೊಂಡಿದೆಯೇ ಹೇಗೆ ಎಂಬುದನ್ನು ತಿಳಿಸಬೇಕು. ಮತ್ತು ಹೊನ್ನಾವರ ತಾಲ್ಲೂಕು ಮಂಕಿ ಗ್ರಾಮಕ್ಕೆ ಒಮ್ಮೆ ಏತ ನೀರಾವರಿ ಅಳವಡಿಸಿ ಕೊಡಬೇಕೆಂದು ೧೯೪೪ನೇ ಇಸವಿಯಲ್ಲಿ ಬಜೆಟ್‌ನಲ್ಲಿ ಸ್ವಲ್ಪ ಹಣವನ್ನು ಸಹ ತೆಗೆದಿಟ್ಟಿದ್ದರು. ಆಮೇಲೆ ಏನಾಯಿತೋ ಅದು ಎಲ್ಲಿ ಹೋಯಿತೋ ಗೊತ್ತಿಲ್ಲ. ಆದರ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಮಾಹಿತಿಯನ್ನು ಕೊಡಂತ್ತಾರೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಹಾಗೆ ರಾಜ್ಯದ ಬಹುತೇಕ ಕಡೆ ಆಣೆಕಟ್ಟುಗಳನ್ನು ಕಟ್ಟಿ ನೀರನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲವೆಂದು ಆವೊಂದು ಹಿನ್ನೆಲೆಯಲ್ಲಿ ಏತ ನೀರಾವರಿ ನಿಗಮವನ್ನು ಪ್ರಾರಂಭ ಮಾಡಿದ್ದಾರೆ. ಆದರಲ್ಲಿ ಕೆಲವೊಂದು ತೊಡಕುಗಳು ಇದ್ದವು. ಆದ್ದರಿಂದ ಏತ ನೀರಾವರಿ ನಿಗಮಗಳು ಸಮರ್ಪಕವಾಗಿ ಕೆಲಸ ಮಾಡುವುದಕ್ಕೆ ಆಗಿಲ್ಲವೆಂದು ಈ ಸಭೆಯಲ್ಲಿ ಹಲವಾರು ಸಾರಿ ಪ್ರಸ್ತಾಪ ಮಾಡಿದ್ದೇವೆ. ಈಗ ನಮ್ಮ ಸರ್ಕಾರ ಹೊಸ ಚಿಂತನೆ ಮಾಡಿ ರೈತರು ಕೊಡಬೇಕಾದ ಷೇರನ್ನು ಸರ್ಕಾರವೇ ತುಂಬಿ ಬ್ಯಾಂಕುಗಳಿಂದ ಸಾಲ ಪಡೆಯುವುದರ ಮೂಲಕ ಈ ಯೋಜನೆಗಳನ್ನು ಮಾಡಬೇಕೆಂದು ತನ್ಮೂಲಕ ರಾಜ್ಯದ ನೀರಾವರಿ ಪ್ರದೇಶವನ್ನು ಹೆಚ್ಚು ಮಾಡಬೇಕೆಂದು ಒಂದು ಖಚಿತವಾದ ನಿಲುವನ್ನು ನಾವು ಈಗಾಗಲೇ ತೆಗೆದು ಕೊಂಡಿದ್ದೇವೆಂದು ತಮಗೆ ತಿಳಿಸಬಯಸುತ್ತೇನೆ. ಆದರಲ್ಲಿ ಹೊನ್ನಾವರ ತಾಲ್ಲೂಕು ಮಂಕಿ ಗ್ರಾಮದ ಏತ ನೀರಾವರಿ ಯೋಜನೆಯ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಿ ಆದರ ಫೀಸಬಲಿಟಿಯನ್ನು ನೋಡಿ ಕೈಗೆತ್ತಿಕೊಳ್ಳುವ ಪ್ರಯತ್ನದಲ್ಲಿದ್ದೇವೆ. ಆದಷ್ಟು ಬೇಗ ಈ ಒಂದು ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ವಿಷಯವನ್ನು ತಿಳಿಸುತ್ತೇನೆ.

ಶ್ರೀ ಆರ್.ಎನ್. ನಾಯಕ್.—ಮಾನ್ಯ ಮಂತ್ರಿಗಳು ಉತ್ತರ ಕೊಡುವ ಇನ್ನೊಂದು ವಿಷಯವನ್ನು ಹೇಳಲಿಲ್ಲ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವುದೇ ಆಣೆಕಟ್ಟು ಅಥವಾ ಕೆರೆಕಟ್ಟೆಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮಲ್ಲಿ ಏತ ನೀರಾವರಿ ಯೋಜನೆಗಳನ್ನೆ ಮಾಡಬೇಕು. ಆದ್ದರಿಂದ ದಕ್ಷಿಣ ಕನ್ನಡ ಮಂತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ವಿಶೇಷವಾದ ಪ್ರಾಶಸ್ತ್ಯವನ್ನು ಕೊಟ್ಟು ಸರ್ಕಾರ ಏನಾದರೂ ಮಾಡುವುದಕ್ಕೆ ಯೋಚನೆ ಮಾಡಿದೆಯೇ ಎನ್ನುವುದನ್ನು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಏತ ನೀರಾವರಿ ಯೋಜನೆ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಆಪ್ಯಕ್ಕೆ ಸೀಮಿತವಲ್ಲ. ರಾಜ್ಯದ ಎಲ್ಲ ಜಿಲ್ಲೆಗಳಿಗೆ ಅನುಕೂಲವಾಗಲಿದೆಯೆಂದು ಏತ ನೀರಾವರಿ ಅವಶ್ಯವಿದೆಯೆಂದು ಸ್ಥಾಪನೆ ಮಾಡಲಾಗಿದೆ. ೯ ಲಕ್ಷ ಎಕರೆಗೆ ನೀರು ಕೊಡಬೇಕೆನ್ನುವ ಉದ್ದೇಶವನ್ನು ಈ ಯೋಜನೆಯಲ್ಲಿ ಅಳವಡಿಸಿಕೊಂಡಿದ್ದೇವೆ. ಆದರಲ್ಲಿ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಸಹ ಸೇರಿವೆಯೆಂದು ತಿಳಿಸಬಯಸುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.—ರಾಜ್ಯದಲ್ಲಿ ಎಷ್ಟು ಏತ ನೀರಾವರಿ ಯೋಜನೆಗಳಿವೆ? ಎಷ್ಟು ಏತ ನೀರಾವರಿ ಯೋಜನೆಗಳು ಕೆಟ್ಟು ಹೋಗಿವೆ? ಏತ ನೀರಾವರಿ ಕಾರ್ಪೊರೇಷನ್‌ಗಳು ಸರಿಯಾಗಿ ಕೆಲಸ ಮಾಡದೆ ಕೇವಲ ಸಿಬ್ಬಂದಿಯನ್ನು ಇಟ್ಟುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಏತ ನೀರಾವರಿ ಯೋಜನೆಯಿಂದ ೩ ಲಕ್ಷದ ೧೩ ಸಾವಿರದ ೯೦೭ ಎಕರೆಗೆ ನೀರು ಕೊಡಬೇಕೆಂದು ಇತ್ತು. ಆದರಲ್ಲಿ ಎಷ್ಟು ಎಕರೆಗಳಿಗೆ ನೀರನ್ನು ಕೊಟ್ಟಿದ್ದೀರಿ? ಎಷ್ಟು ಯೋಜನೆಗಳು ಕಾರ್ಯಗತವಾಗಿವೆ ಎಂಬುದನ್ನು ತಿಳಿಸಬೇಕು. ಎಷ್ಟು ಏತ ನೀರಾವರಿ ಯೋಜನೆಗಳು ಕೆಟ್ಟಿವೆ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಏತ ನೀರಾವರಿ ಯೋಜನೆಗಳು ಆಗಬೇಕು. ಏತ ನೀರಾವರಿ ಯೋಜನೆಯಿಂದ ೩ ಲಕ್ಷದ ೧೩ ಸಾವಿರ ಎಕರೆಗಳಿಗೆ ನೀರಾವರಿಯಾಗಬೇಕೆಂದು ಯೋಜನೆ ಇದ್ದರೂ ಕೂಡ ಅಲ್ಲಿರತಕ್ಕ ಪಂಪುಗಳು ಮತ್ತು ಯಂತ್ರಗಳಿಂದ ಆಗುತ್ತಿಲ್ಲ ಅವು ಬಹಳ ಹಳೆಯವು. ನಾವು ಯೋಜಿಸಿರುವ ಪ್ರದೇಶಕ್ಕೆ ಆ ಯಂತ್ರಗಳಿಂದ ನೀರನ್ನು ಕೊಡುವುದಕ್ಕೆ ಆಗುತ್ತಿಲ್ಲ. ಮಾನ್ಯ ಸದಸ್ಯರು ಹೇಳಿದ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವುಗಳಿಗೆ ಕಾಯಕಲ್ಪ ಮಾಡಬೇಕೆನ್ನುವ ನಿರ್ಧಾರವನ್ನು ನಾವು ತೆಗೆದುಕೊಂಡಿದ್ದೇವೆ. ಹಳೆಯ ಪಂಪುಗಳನ್ನು ಬದಲಾಯಿಸಿ ಹೊಸ ಪಂಪುಗಳನ್ನು ಹಾಕಬೇಕು. ನಾವೇನು ಇಷ್ಟು ಎಕರೆಗೆ ನೀರನ್ನು ಒದಗಿಸಬೇಕೆಂದು ನಿಗದಿ ಮಾಡಿದ್ದೇವೆ, ಆ ಪ್ರದೇಶಕ್ಕೆ ನೀರನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಏತ ನೀರಾವರಿ ನಿಗಮದ ಬಗ್ಗೆ ಹೇಳಿದ್ದಾರೆ, ಅದಕ್ಕೆ ಹೊಸದಾಗಿ ಚಾಲನೆಯನ್ನು ಕೊಡುತ್ತಿದ್ದೇವೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ, ಏತ ನೀರಾವರಿ ನಿಗಮಗಳನ್ನು ಏನು ಮಾಡಿದ್ದಾರೆ ಅಲ್ಲಿ ಬಹಳ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವ ಆಪಾದನೆ ಬಂದಿರುವುದನ್ನು ನಾವು ಪತ್ರಿಕೆಗಳಲ್ಲಿ ಓದಿ ನೋಡಿದ್ದೇವೆ. ಅದನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಏತ ನೀರಾವರಿ ನಿಗಮಗಳಲ್ಲಿ ಯಾವ್ಯಾವ ಭ್ರಷ್ಟಾಚಾರ ನಡೆದಿದೆ? ಎಷ್ಟು ಪ್ರಮಾಣದ ಭ್ರಷ್ಟಾಚಾರ ನಡೆದಿದೆ? ಅಲ್ಲಿರತಕ್ಕ ಅಧಿಕಾರಿಗಳ ಮೇಲೆ ಏನಾದರೂ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಏನಾದರೂ ಕಾರ್ಯಕ್ರಮಗಳನ್ನು ರೂಪಿಸಿದ್ದೀರಾ. ಸರಿಯಾದ ರೀತಿಯಲ್ಲಿ ಏತ ನೀರಾವರಿ ನಿಗಮ ಕಾರ್ಯಕ್ರಮ ನಡೆಸುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರಾ? ಹಾಗಿದ್ದರೆ ಅದರ ರೂಪರೇಷೆಗಳನ್ನು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಲಿಫ್ಟ್ ಇರಿಗೇಶನ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ನಾನು ಮೇಲಿಂದಮೇಲೆ ಹೇಳಿದ್ದೇನೆ. ಆದ್ದರಿಂದ ಲಿಫ್ಟ್ ಇರಿಗೇಶನ್ ಬಗ್ಗೆ ಭ್ರಷ್ಟಾಚಾರ ಉದ್ಭವ ವಾಗುವುದಿಲ್ಲ. ಹಾಗೇನಾದರೂ ಮಾನ್ಯ ಸದಸ್ಯರು...

ಶ್ರೀ ಕೆ. ಲಕ್ಕಪ್ಪ.—ಭ್ರಷ್ಟಾಚಾರ ನಡೆಸಿದ್ದಾರೆ, ಕೆಲಸ ಮಾಡುತ್ತಿಲ್ಲ ಎಂಬ ಆಪಾದನೆಗಳು ಪತ್ರಿಕೆಗಳಲ್ಲೇ ಬಂದಿರತಕ್ಕದ್ದು. ಇದು ಅನೇಕ ಕಡೆ ನಡೆದಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ ಎಂದು ನಾನು ಒಪ್ಪುತ್ತೇನೆ. ಕಾರಣ ಕೂಡ ಹೇಳಿದ್ದೇನೆ. ಆದರೆ ಭ್ರಷ್ಟಾಚಾರ ಆಪಾದನೆ ಖಂಡಿತವಾಗಿ ಇದ್ದರೆ ತಮ್ಮ ಮೂಲಕ ಮಾನ್ಯ ಸದಸ್ಯರು ತಮ್ಮ ಮೂಲಕ ಸ್ಪಷ್ಟಪಡಿಸಿದರೆ ನಾನು ತನಿಖೆ ಮಾಡಿಸುವುದಕ್ಕೆ ಬದ್ಧನಾಗಿದ್ದೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ತುಮಕೂರು—ಬೆಂಗಳೂರು ನಡುವೆ ತಡೆ ರಹಿತ ಬಸ್ಸುಗಳ ಬಗ್ಗೆ

೩೪೩. ಶ್ರೀ ಎಸ್. ಶಫಿ ಅಹಮದ್ (ತುಮಕೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಯಾಣಿಕರ ಬೇಡಿಕೆಯನ್ನು ಈಡೇರಿಸಲು ತುಮಕೂರಿನಿಂದ ಬೆಂಗಳೂರಿಗೆ ಸಂಚರಿಸುವ ತಡೆ ರಹಿತ ಬಸ್ಸುಗಳನ್ನು ಹೆಚ್ಚಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರತಿ ದಿಕ್ಕಿನಿಂದ ೨೬ ತಡೆರಹಿತ ಬಸ್ಸುಗಳನ್ನು ಓಡಿಸಲಾಗುವದಲ್ಲದೇ ತುಮಕೂರಿನಿಂದ ಬೆಂಗಳೂರಿಗೆ ೬ ಹೆಚ್ಚುವರಿ ತಡೆರಹಿತ ಟ್ರಿಪ್ಪುಗಳನ್ನು ದಿನಾಂಕ ೧೦-೬-೧೯೯೦ ರಿಂದ ಪ್ರಾರಂಭಿಸಲಾಗಿದೆ.

ದಾವಣಗೆರೆಯಲ್ಲಿ ಬಸ್‌ಸ್ಟ್ಯಾಂಡಿನಲ್ಲಿಯ ಅವ್ಯವಸ್ಥೆಯ ಬಗ್ಗೆ

೪೭೦. ಶ್ರೀ ವೈ ಎಂ. ವೀರಣ್ಣ (ದಾವಣಗೆರೆ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಾವಣಗೆರೆಯಲ್ಲಿ ಪ್ರಾರಂಭಿಸಲಾದ ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ನಿಲ್ದಾಣವು ಹಲವಾರು ಅವ್ಯವಸ್ಥೆಯ ಆಗರವಾಗಿದೆಯೆಂಬ ದೂರು ಸರ್ಕಾರಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಅವ್ಯವಸ್ಥೆಯನ್ನು ನಿವಾರಿಸಲು ತೆಗೆದುಕೊಂಡ ಕ್ರಮಗಳೇನು?